## 3ನೇ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹುಬ್ಬಳ್ಳಿ

## ಸಿ ಸಿ ನಂಃ 1894/2022

ಫಿರ್ಯಾದುದಾರರು ಃ- ಸರ್ಕಾರದ ಪರವಾಗಿ
ಉತ್ತರ ಸಂಚಾರ ಪೋಲಿಸ ಠಾಣೆ,
ಹುಬ್ಬಳ್ಳಿ.

ಃ ವಿರುದ್ದ ಃ

ಆರೋಪಿತ ಃ-

| | |
|---|---|
| 1 | ಮಣಿಕಂಠ ಹನುಮಂತಪ್ಪ ಬಿಸ್ತಣ್ಣವರ,<br>ಸಾಃ ಅಮರಗೋಳ, ಹುಬ್ಬಳ್ಳಿ |
| 2 | ಮಂಜುನಾಥ ಈರಪ್ಪ ಬಿಸ್ತಣ್ಣವರ,<br>ಸಾಃ ಅಮರಗೋಳ, ಹುಬ್ಬಳ್ಳಿ |

-ಃ ದ ಪ್ರ ಸಂ ಕಲಂ 313 ಅಡಿಯಲ್ಲಿ **ಆರೋಪಿತರ** ಹೇಳಿಕೆ ಃ-

ಪ್ರಶ್ನೆ1ಃ- ಈ ಪ್ರಕರಣದಲ್ಲಿ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ ?
ಉತ್ತರಃ

ಪ್ರಶ್ನೆ2ಃ- ಪ್ರಾ.ಸಾ-1 ಭರ್ಮಪ್ಪಾ ಬೆಟಗೇರಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 17.09.2022 ರಂದು ರಾತ್ರಿ 9.10 ಗಂಟೆಗೆ ಕಾಮನಬೂದಿ ಸರ್ಕಲನಲ್ಲಿ ತನ್ನ ಮಗ ರಸ್ತೆ ಬದಿಯಲ್ಲಿ ಬೈಕನ್ನು ನಿಲ್ಲಿಸಿಕೊಂಡಾಗ ಒಂದು ಬೂಲೆಟ ಗಾಡಿ ಸ್ಟೇಷನ ರಸ್ತೆ ಕಡೆಯಿಂದ ವೇಗವಾಗಿ ಬಂದು ಅಪಘಾತ ಪಡಿಸಿತು. ಇದರ ಪರಿಣಾಮವಾಗಿ ಚಾ.ಸಾ 8 ಅಲ್ಲಿ ಬಿದ್ದನು. ನಂತರ ತನಗೆ ಕರೆ ಮಾಡಿ ಅಪಘಾತ ಸ್ಥಳಕ್ಕೆ ಬರಲು ತಿಳಿಸಿದನು. ತಾನು ಗಾಬರಿಗೊಂಡು ಹೋದಾಗ ಅಲ್ಲಿ ಬಹಳ ಜನ ಕೂಡಿದ್ದರು. ಚಾ.ಸಾ 8 ರವರ ಕಾಲು ಮುರಿದು ರಕ್ತ ಸೋರುವುದನ್ನು ನೋಡಿದೇನು. ಅಲ್ಲಿ ಅಪಘಾತವಾದ ಎರಡೂ ಗಾಡಿಗಳು ಬಿದ್ದಿದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಉತ್ತರಃ

ಪ್ರಶ್ನೆ3ಃ- ಪ್ರಾ.ಸಾ-1 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅಪಘಾತ ಪಡಿಸಿದ ಚಾಲಕರು ಸ್ಥಳದಲ್ಲಿರಲಿಲ್ಲ. ತಾನು ಚಾ.ಸಾ 8 ರವರನ್ನು ಕರೆದುಕೊಂಡು ಎಸ್.ಡಿ.ಎಂ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಅವನಿಗೆ ಎಡಗಾಲಿಗೆ ಪೆಟ್ಟಾಗಿರುತ್ತದೆ. ಅಪಘಾತವಾದ ಸಮಯ ರಾತ್ರಿ 9.10 ಗಂಟೆಯಾಗಿತ್ತು.

ಚಾ.ಸಾ 8 ರವರು ಚಲಾಯಿಸುತ್ತಿದ್ದ ಗಾಡಿ ನಂಬರ ಕೆಎ-25 ಎಚ್ ಸಿ -3541 ಮತ್ತು ಅಪಘಾತ ಪಡಿಸಿದ ಮೋಟಾರು ಸೈಕಲ ನಂಃ ಕೆಎ- 25 ಇಎಸ್ -5172 ಇತ್ತು. 2 ಗಾಡಿಗಳು ಘಟನಾ ಸ್ಥಳದಲ್ಲಿ ಬಿದ್ದಿದ್ದವು. ಚಾ.ಸಾ 8 ರವರಿಗೆ ಅಪಘಾತ ಪಡಿಸಿದ ವ್ಯಕ್ತಿಯು ಈ ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಆಪಾದಿತನಾಗಿರುತ್ತಾನೆ. ದಿನಾಂಕಃ 19.09.2022 ರಂದು ಮ. 12.00 ಗಂಟೆಯಿಂದ 1.00 ಗಂಟೆಯವರೆಗೆ ಅಪಘಾತವಾದ ಸ್ಥಳವನ್ನು ತಾನು ತೋರಿಸಿದ ಮೇರೆಗೆ ಪೋಲೀಸರು ಚಾ.ಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ4ಃ- ಪ್ರಾ.ಸಾ-2 ರವಿ ಕಬ್ಬೂರ ಇವರು ತಮ್ಮ ಸಾಕ್ಷ್ಯದಲ್ಲಿ ಸಾಕ್ಷಿಯು ಒಂದು ದಾಖಲೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದು ಗಟನಾ ಸ್ಥಳದ ಪಂಚನಾಮೆಯಾಗಿದ್ದು ಸದರಿ ಸಹಿಯನ್ನು ದಿನಾಂಕಃ 19.09.2022 ರಂದು ಮ. 12.00 ಗಂಟೆಯಿಂದ 1.00 ಗಂಟೆಯ ಸಮಯದಲ್ಲಿ ಕಾಮನಬೂದಿ ಸರ್ಕಲನಲ್ಲಿ ಮಾಡಿರುತ್ತೇನೆ. ಅಲ್ಲಿ 2 ಬೈಕುಗಳ ಅಪಘಾತವಾದ ಕುರಿತು ಪೋಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಚಾ.ಸಾ 1 ಮತ್ತು 3 ರವರು ಇದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ5ಃ- ಪ್ರಾ.ಸಾ-4 ಸೋಮನಗೌಡ ಅಮೃತಗೌಡ ಪಾಟೀಲ ಇವರು ತಮ್ಮ ಸಾಕ್ಷ್ಯದಲ್ಲಿ ದಿ 17-08-2022 ರಂದು ರಾತ್ರಿ 8.30 ಸುಮಾರಿಗೆ ತಾನು ಊಟ ಮಾಡಿ ಅಮರಗೋಳ ಕಾಮನ ಬೂದಿ ಸರ್ಕಲದಲ್ಲಿ ನಿಂತಿರುವಾಗ 1 ನೇ ಆರೋಪಿ ಗಾಡಿ ನಂಬರ ಕೆಎ 25 ಇ ಎಸಿ 5172 ನ್ನು ಚಲಾಯಿಸಿಕೊಂಡು ಬಂದು ಇನ್ನೊಂದು ಗಾಡಿ ಪಲ್ಸರ ಗಾಡಿ ನಂಬರ ಕೆಎ 25 3541 ಕ್ಕೆ ಜೊರಾಗಿ ಬಂದು ಡಿಕ್ಕಿ ಪಡೆಯಿಸಿದನು. ಪಲ್ಸರ ಗಾಡಿ ಸವಾರ ಮಂಜುನಾಥ ಬೆಟಗೆರಿ ಚಾಸಾ-8 ರವರಿಗೆ ಕಾಲಿ ಮತ್ತು ಕೈಗೆ ಗಾಯ ವಾಗಿತ್ತು. ನಂತರ ಅವರ ಸಂಬಂಧಿಕರಿಗೆ

ಕರೆ ಮಾಡಿ ಎಸ್ ಡಿ ಎಂ ಆಸ್ಪತ್ರೆಗೆ ಕಳಹಿಸಿಕೊಟ್ಟೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ6ಃ- ಪ್ರಾ.ಸಾ-5 ಅನಿಲ ಶಂಕರಪ್ಪಾಸೋಗಿ ಇವರು ತಮ್ಮ ಸಾಕ್ಷ್ಯದಲ್ಲಿ ಸಾಕ್ಷಿಯು ಒಂದು ದಾಖಲೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದು ವಾಹನ ಯಾಂತ್ರಿಕ ಪರೀಕ್ಷೆ ಕುರಿತು ತಡೆಹಿಡಿದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-4 ಗುರುತಿಸಲಾಗಿದ್ದು ಮತ್ತು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿಪಿ-4 ಸಿ** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿ 19-08-2022 ರಂದು ಅಮರಗೋಳದ ಕಾಮನಬೂತಿ ಸರ್ಕಲದಲ್ಲಿ ಮಾಡಿರುತ್ತೇನೆ. ಅಲ್ಲಿ ಅಪಘಾತವಾದ ಗಾಡಿಯನ್ನು ತರಲು ಹೋದಾಗ ಸಹಿಯನ್ನು ಮಾಡಿರುತ್ತೇನೆ. ಅಪಘಾತವಾದ ಕುರಿತು ಪೋಲೀಸರು ಒಂದು ಬುಲೆಟ ಮೋಟಾರು ಸೈಕಲ ಮತ್ತು 150 ಪಲ್ಸರ ಮೋಟಾರು ಸೈಕಲನ್ನು ಜಪ್ತು ಮಾಡಿಕೊಂಡರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ7ಃ- ಪ್ರಾ.ಸಾ-6 ಮಂಜುನಾಥ ಫಕೀರಪ್ಪ ಹುರಕಡ್ಲಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 17.09.2022 ರಂದು ರಾ. 8.30 ಸುಮಾರಿಗೆ ತಾನು ಊಟ ಮಾಡಿಕೊಂಡು ಆಸ್ಪತ್ರೆಗೆ ಹೋಗುವಾಗ ಚಾ.ಸಾ 8 ರವರು ತನ್ನ ಮೋಟಾರು ಸೈಕಲನ್ನು ರಸ್ತೆಯ ಬದಿಗೆ ನಿಲ್ಲಿಸಿದ್ದರು. 1 ನೇ ಆಪಾದಿತನು ಹುಬ್ಬಳ್ಳಿ ಕಡೆಯಿಂದ ಒಂದು ಬುಲೆಟ ಗಾಡಿಯನ್ನು ತೆಗೆದುಕೊಂಡು ಅಮರಗೋಳ ಒಳಗೆ ಜೋರಾಗಿ ಬಂದು ಚಾ.ಸಾ 8 ರವರ ನಿಲ್ಲಿಸಿದ ಗಾರಿಗೆ ಡಿಕ್ಕಿಪಡಿಸಿದರು . ಸದರಿ ನಿಲ್ಲಿಸಿದ ಮೋಟಾರು ಸೈಕಲ ಮೇಲೆ ಕುಳಿತಿದ್ದ ಚಾ.ಸಾ 8 ರವರಿಗೆ ಅಪಘಾತ ಪಡಿಸಿದರು . ಚಾ.ಸಾ 8 ರವರಿಗೆ ಕಾಲಿಗೆ ಗಾಯವಾಗಿದ್ದು ಹಾಗೂ ಅವರ ಮೋಟಾರು ಸೈಕಲ ಜಕಂವಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

**ಪ್ರಶ್ನೆ** 8) ಫ್ರಾಸಾ-6 ಮಂಜುನಾಥ ಫಕೀರಪ್ಪ ಹುರಕಡ್ಲಿ ಇವರು ಸಹಾಯಕ ಅಭಿಯೋಜಕರ ಪಾಟೀ ಸವಾಲಿನಲ್ಲಿ ಹೇಳಿರುವುದೇನೆಂದರೆ, ಬಜಾಜ ಪಲ್ಸರ ಮೋಟಾರು ಸೈಕಲ ನಂಃ ಕೆಎ-25 ಎಚ್‌ಸಿ-3541 ಚಾ.ಸಾ 8 ರವರ ವಾಹನವಾಗಿತ್ತು. 1 ನೇ ಆಪಾದಿತನು ವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ಬಂದು ವೇಗವನ್ನು ನಿಯಂತ್ರಿಸಲಾಗದೇ ತನ್ನ ಮೋಟಾರು ಸೈಕಲಯಿಂದ ಚಾ.ಸಾ 8 ರವರಿಗೆ ಅಪಘಾತ ಪಡಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ9ಃ- ಪ್ರಾ.ಸಾ-7 ಮಂಜುನಾಥ ಭರಮಪ್ಪ ಬೇಟಗೇರಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 17.09.2022 ರಂದು ರಾ. 8.30 ಸುಮಾರಿಗೆ ತಾ ಕಾಮನಬೂದಿ ಸರ್ಕಲದಲ್ಲಿ ಮನೆಗೆ ಹೋಗುವ ರಸೆರ್ಯಲ್ಲಿ ತನ್ನ ಮೋಟಾರು ಸೈಕಲ ನಂಃ ಕೆಎ-25 ಎಚ್‌ಸಿ-3541 ರ ಮೇಲೆ ಕುಳಿತಿದ್ದೆ . 1 ನೇ ಆರೋಪಿತ ತನ್ನ ಬುಲೆಟ ಗಾಡಿ ನಂಃ ಕೆಎ-25 ಇಎಸ್-5172 ತೆಗೆದುಕೊಂಡು ಬಂದು ತನಗೆ ಅಪಘಾತ ಪಡಿಸಿದರು. 1 ನೇ ಆಪಾದಿತನು ಜೋರಾಗಿ ಬಂದು ತನ್ನ ಮೋಟಾರು ಸೈಕಲಗೆ ಹೊಡೆದನು ಆಗ ತಾನು ಅಲ್ಲಿಯೇ ಬಿದ್ದೇನು. ತನ್ನ ಎಡಗಾಲು ಮುರಿದಿತ್ತು. 1 ನೇ ಆಪಾದಿತನು ಸ್ಥಳದಿಂದ ಓಡಿ ಹೋಗಿರುತ್ತಾನೆ. ಸ್ಥಳದಲ್ಲಿ ಕೂಡಿದ ಜನರು ತನ್ನ ತಂದೆಯವರನ್ನು ಕರೆಸಿದರು. ನಂತರ ತನ್ನನ್ನು ಎಸ್.ಡಿ.ಎಂ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ತಾನು 10 ದಿನ ಚಿಕಿತ್ಸೆಯನ್ನು ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ10ಃ- ಪ್ರಾ.ಸಾ-8 ನಾರಾಯಣ ಮಲ್ಲಪ್ಪ ಮದನಬಾವಿ ಇವರು ತಮ್ಮ ಸಾಕ್ಷ್ಯದಲ್ಲಿ ದಿ 18-09-2022 ರಂದು ಸಂಜೆ 7.15 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ತನ್ನ ಪಿರ್ಯಾದಿಯನ್ನು ಟೈಪ ಮಾಡಿಸಿ ಹಾಕಿರುತ್ತಾರೆ. ಅದನ್ನು ಸ್ವೀಕರಿಸಿರುತ್ತೆನೆ ಅದನ್ನು ಠಾಣೆಯ ನಂಬರ 110/2022 ರಲ್ಲಿ ದಾಖಲು ಮಾಡಿಕೊಂಡಿರುತ್ತೆನೆ. ಪ್ರ ವ ವ ಯೊಂದಿಗೆ ಮೂಲ ಪಿರ್ಯಾದಿಯನ್ನು

ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೆನೆ. ದಿ 19-09-2022 ರಂದು ಅಪಘಾತ ಸ್ಥಳ ಕಾಮನಬೂಧಿ ಸರ್ಕಲ ನಾರಾಯಣ ಪೂರ ಓಣಿ ಅಮರಗೋಳಕ್ಕೆ ಹೋಗಿ ಚಾ.ಸಾ 2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಗಟನಾ ಸ್ಥಳದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಮಾಡಿ ನಿಪಿ- 3 ರಂತೆ ಪೋಟೋವನ್ನು ತೆಗೆದಿರುತ್ತೆನೆ. ವಾಹನಗಳನ್ನು ಸ್ಥಳದಿಂದ ಠಾಣೆಗೆ ತೆಗೆದುಕೊಂಡು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ11ಃ- ಪ್ರಾ.ಸಾ-8 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿನ ಠಾಣೆ ಆವರಣದಲ್ಲಿ ಅಪಘಾತ ಕ್ಕೆ ಒಳಗಾದ ಗಾಡಿ ನಂಬರ ಕೆಎ 25 ಇ ಎಸ್ 5172 ಮತ್ತು ಬಜಾಜ ಪಲ್ಸರ ಗಾಡಿ ಕೆಎ 25 ಎಚ್ ಸಿ 3541 ಗಳನುನ ಅಪಘಾತಕ್ಕೆ ಕುರಿತು ಚಾಸಾ-4 ಮತ್ತು 5 ರ ಸಮಕ್ಷಮ ನಿಪಿ-4 ರಂತೆ ಪಂಚನಾಮೆ ಮಾಡಿ ನಿಪಿ-5 ಮತ್ತು 6 ರಂತೆ ಪೋಟೋವನ್ನು ತೆಗೆದಿರುತ್ತೆನೆ. ಸದರಿ ವಾಹನಗಳ ಕುರಿತು ಮಾನ್ಯ ನ್ಯಾಯಾಲಯಕ್ಕೆ ಸ್ವತ್ತು ಪಟ್ಟಿಯನ್ನು ಬರೆಯಿಸಿ ಕೊಟ್ಟೆನು. ಅದೇ ದಿನ ಚಾಸಾ-6 ಮತ್ತು 7 ರವರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ 20-09-2022 ರಂದು ವಾಹನ ನಂಬರ ಕೆಎ 25 ಇ ಎಸ್ 5172 ನೇದರ ಮಾಲೀಕರಿಗೆ ಗಾಡಿಯ ದಾಖಲೆಯನ್ನು ಹಾಜರುಪಡಿಸಲು ನೋಟಿಸನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ12ಃ- ಪ್ರಾ.ಸಾ-8 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿ 22-09-2022 ರಂದು ಅಪಘಾತದಲ್ಲಿ ಜಕಂಗೊಂಡ ಗಾಡಿಯನ್ನು ವಶಕ್ಕೆ ಪಡೆದು ಸದರಿ ವಾಹನದ ಯಾಂತ್ರಿಕ ಪರೀಕ್ಷೆ ಮಾಡಲು ಆರ್.ಟಿ.ಒ ರವರಿಗೆ ಕೋರಿಕೆಯನ್ನು ಸಲ್ಲಿಸಿರುತ್ತೇನೆ. ಅದೇ ದಿನ ಸದರಿ ಆರ್.ಟಿ.ಒ ಪರೀಕ್ಷಾ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ 24-09-2022 ರಂದು ಸದರಿ ಅಪಘಾತಕ್ಕೆ ಇಡಾದ ಗಾಡಿ ಮಾಲೀಕರಾದ

ಚಾಸಾ 9 ರವರು ಠಾಣೆಗೆ ಹಾಜರಾಗಿ ಸದರಿ ವಾಹನ ನಂಬರ ಕೆಎ 25 ಇ ಎಸ್ 5172 ನೇದರ ದಾಖಲಾತಿಗಳನ್ನು ನೀಡಿರುವ ಪ್ರಕಾರ ಪರಿಶೀಲಿಸಿ ಹಾಗೂ ಸದರಿಯವರು ಒಂದು ಮುಚ್ಚಳಿಕೆ ಪತ್ರವನ್ನು ನೀಡಿದ್ದರ ಪ್ರಕಾರ ಸದರಿ ಬುಲೆಟ್ ಗಾಡಿ ಬಿಡುಗಡೆ ಮಾಡಲಾಯಿತು. ದಿಃ 04-10-2022 ರಂದು ಚಾಸಾ-8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೆನೆ. ಅದೇ ದಿನ ಎಸ್ ಡಿ ಎಂ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ 08-10-2022 ರಂದು ಗಾಯಾಳು ಚಾಸಾ-8 ರವರ ಹೇಳಿಕೆಯನ್ನು ಅವರ ಮನೆಯಲ್ಲಿ ಪಡೆದುಕೊಂಡಿರುತ್ತೆನೆ. ಇಬ್ಬರು ಆರೋಪಿತರು ಮತ್ತು ಚಾಸಾ-8 ರವರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದಿದ್ದು ಅವನ ವಿರುದ್ದ ಅಂತೀಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ 13ಃ- ನಿಮಗೆ ಬೇರೆ ಏನಾದರೂ ಹೇಳುವುದು ಇದೆಯಾ ?

ಉತ್ತರ ಃ-

ಪ್ರಶ್ನೆ 14ಃ- ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಮಾಡಿಸುತ್ತೀರಾ?

ಉತ್ತರಃ-

(ಆರೋಪಿಗಳಿಗೆ ಮುಕ್ತ ನ್ಯಾಯಾಲಯದಲ್ಲಿ ಮೇಲ್ಕಂಡಂತೆ ಪ್ರಶ್ನೆಗಳನ್ನು ಕೇಳಿದ್ದು ಅವರು ನೀಡಿದ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಪ್ರಮಾಣೀಕರಿಸುತ್ತೇನೆ)

ದಿಃ 07.02.2024 ಪ್ರ.ದ.ನ್ಯಾ.ದಂ. 3ನೇ ನ್ಯಾಯಾಲಯ, ಹುಬ್ಬಳ್ಳಿ.